

ಬಾಲಿವುಡ್ ತಾರೆ ಜಾಕೀ ಶ್ರಾಫ್ ಮತ್ತು ನಿರ್ದೇಶಕ ರೋಹಿತ್ ಶೆಟ್ಟಿ ಜೊತೆ



ಜೀನತ್ ಅಮಾನ್ ಅಭಿನಯದ ಸಿನಿಮಾವೊಂದರಲ್ಲಿ ಕಟ್ಟಡದ ಮೇಲಿನಿಂದ ಬೀಳುವ ದೃಶ್ಯದಲ್ಲಿ ಸ್ಟಂಟ್ ಮಾಡಲು ಹೋಗಿ ಸ್ಪೈನಲ್ ಕಾರ್ಡ್ ಮುರಿದುಕೊಂಡಿದ್ದರು. ಲಡಾಕ್‌ನಲ್ಲಿ ಸ್ಟಂಟ್ ಮಾಡುವ ಸಂದರ್ಭದಲ್ಲಿ ಬೆಂಕಿಯಲ್ಲಿ ಸುಟ್ಟುಕೊಂಡಿದ್ದರು. ಇಂಥ ಹಲವು ಸರಣಿ ಘಟನೆಗಳ ಉದಾಹರಣೆ ನೀಡುತ್ತಾ ತಮ್ಮ ವೃತ್ತಿಯನ್ನೇ ಸವಾಲಾಗಿ ಸ್ವೀಕರಿಸಿದ ಮಹಿಳೆ ಗೀತಾ ಟಂಡನ್. ಪರಿಣೀತಿ ಚೋಪ್ರಾ, ಕರೀನಾ ಕಪೂರ್, ಆಲಿಯಾ ಭಟ್, ದೀಪಿಕಾ ಪಡುಕೋಣೆ ಹಾಗೂ 'ಜಸ್‌ಬಾ' ಸಿನಿಮಾದಲ್ಲಿ ಐಶ್ವರ್ಯಾ ರೈ ಅವರಿಗೆ ಸ್ಟಂಟ್ ಮಾಡಿದ್ದಾರೆ.

ನಾನು ಮುಂಬೈನವಳು. ಹತ್ತು ವರ್ಷದವಳಿದ್ದಾಗ ತಾಯಿ ಕಳಕೊಂಡೆ. ನಾವು ಒಟ್ಟು ನಾಲ್ಕು ಜನ ಮಕ್ಕಳು. ತಂದೆಗೆ ನಮ್ಮೆಲ್ಲರನ್ನು ಸಾಕುವುದು ಕಷ್ಟವಾಗುತ್ತಿತ್ತು. 15 ವರ್ಷದವಳಾಗಿದ್ದಾಗ ನನಗೆ ಮದುವೆ ಆಯ್ತು.

ಅನುಕೂಲವಿರುವ ಮನೆಯಲ್ಲಿ ಸಂಸಾರ ಮಕ್ಕಳಾಟ ಎಂದುಕೊಂಡಿದ್ದೆ. ಲೈಂಗಿಕತೆ (ಸೆಕ್ಸ್) ಬಗ್ಗೆ ಏನೂ ಗೊತ್ತಿರಲಿಲ್ಲ. ಮೊದಲ ರಾತ್ರಿ ಭಯವಾಗಿತ್ತು. ಗಂಡ ಮಧ್ಯರಾತ್ರಿವರೆಗೆ ಕುಡಿದು ಕೂತಿದ್ದ. ತಾಯಿ ಕಳೆದುಕೊಂಡ ಹುಡುಗಿಗೆ ಸಂಸಾರವೆಂದರೆ ಹೀಗೆ ಎಂದು ಯಾರು ಹೇಳಬೇಕು..

ಕುಡಿಯುವುದು, ನನ್ನೊಂದಿಗೆ ಅಸಭ್ಯವಾಗಿ ವರ್ತಿಸುವುದು ಅವನ ಚಾಳಿ. ಸಿಟ್ಟು ಬಂದರೆ ತಟ್ಟೆ, ಲೋಟವನ್ನು ಮುಖದ ಮೇಲೆ ಎಸೆಯುತ್ತಿದ್ದ. ಇಡೀ ರಾತ್ರಿ ಕುಡಿದು ವಿಚಿತ್ರವಾಗಿ ಹಿಂಸೆ ಮಾಡುತ್ತಿದ್ದ. ಮದುವೆಯಾಗಿ ವಾರ ಕಳೆಯುವಷ್ಟರಲ್ಲಿ ಅತ್ತೆ ಅಸಭ್ಯವಾಗಿ ಮಾತನಾಡಲು ಶುರು ಮಾಡಿದರು. ಏನ್ ಹೆಣ್ಣು ಅಂತ ಮದುವೆ ಮಾಡಿಕೊಂಡೆವು ಎಂದು ಹೀಯಾಳಿಸುತ್ತಾ ಮಗನಿಗೆ 'ನೀನೇನು ಗಂಡಸ? ಅವಳ ಬಟ್ಟೆ ಕಿತ್ತೆಸೆದು ರೇಪ್ ಮಾಡು. ಅವಳೇ ದಾರಿಗೆ ಬರುತ್ತಾಳೆ' ಎಂದು ಮಗನಿಗೆ ಬೈದರು. ಅವನೂ ಹಾಗೇ ಮಾಡಿದ.

ಅವನಿಗೆ ನನ್ನನ್ನು ಅತ್ಯಾಚಾರ ಮಾಡುವುದೇ ಚಾಳಿ ಆಯ್ತು. ಸಂಜೆ-ಯಾದರೆ ಜೀವ ಬಾಯಿಗೆ ಬರೋದು. ಅವನು ಮನೆಗೆ ಬಂದರೆ ಯಾವು-ದಾದರೂ ಮೂಲೆ ಸೇರಿಬಿಡುತ್ತಿದ್ದೆ. ಮಗುವಾಗುವವರೆಗೆ ಹೀಗೆ ಮಾಡುತ್ತಾನೆ ನಂತರ ಸರಿಯಾಗುತ್ತಾನೆ ಎಂದುಕೊಳ್ಳುತ್ತಿದ್ದೆ. ಅದೂ ಸುಳ್ಳಾಯಿತು.

ಹಿಂಸಿಸುವುದೇ ಅವನ ಉದ್ದೇಶ. ಸಿಲೆಂಡರ್ ಪೈಪ್ ಬಿಚ್ಚಿ ಹೊಡೆಯುತ್ತಿದ್ದ. ಪ್ರತಿಕ್ರಿಯಿಸದೆ ಸಹಿಸಿಕೊಂಡರೆ ಸಿಲಿಂಡರ್ ಎತ್ತಿ ನನ್ನ ಮೇಲೆ ಎಸೆಯುತ್ತಿದ್ದ. ಇನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎನ್ನಿಸಿ ಪೊಲೀಸ್ ಠಾಣೆಗೆ ಬಂದರೆ, ಇದೆಲ್ಲಾ ಕುಟುಂಬ ಸಮಸ್ಯೆ 'ಸಣ್ಣ ವಿಷಯ'ವೆಂದು ಸಾಗಹಾಕಲು ಯತ್ನಿಸಿದರು.

ವಾಪಸ್ ಮನೆಗೆ ಹೋದರೆ ಸಾಯುವುದು ಖಂಡಿತ. ಹೇಗಿದ್ದರೂ ಒಂದು ದಿನ ಸಾಯಲೇ ಬೇಕು. ಹೀಗೆ ಇಷ್ಟು ನೋವು ಅನುಭವಿಸಿಕೊಂಡು ಯಾಕೆ ಸಾಯಲಿ? ಮನಸ್ಸನ್ನು ಗಟ್ಟಿಮಾಡಿಕೊಂಡೆ, ಸೀದಾ ಮನೆಗೆ ಹೋಗಿ 'ನಿನ್ನೊಂದಿಗೆ ಇರಲಾರೆ' ಎಂದೆ. ಅವನು ಕತ್ತಿ ಹಿಡಿದುಕೊಂಡು ಹಲ್ಲೆ ಮಾಡಿದ. ರಾತ್ರಿ ಇಬ್ಬರು ಮಕ್ಕಳನ್ನು ಕರೆದುಕೊಂಡು ಅಕ್ಕನ ಮನೆ ತಲುಪಿದೆ.

ಅಕ್ಕನ ಮನೆಯಲ್ಲಿ ಖುಷಿಯಾಗಿದ್ದೆ. ಮದುವೆಯಾದ ದಿನದಿಂದ ರಾತ್ರಿಗಳು ಇಷ್ಟು ನೆಮ್ಮದಿಯಾಗಿರಬಹುದು ಎಂದುಕೊಂಡಿರಲಿಲ್ಲ. ಭಾವನ ತಂದೆ ತಾಯಿ ಆರೋಗ್ಯ ಕೆಟ್ಟಿತು. ಆರ್ಥಿಕ ಮುಗ್ಗಟ್ಟು ಎದುರಾಯಿತು. ಇನ್ನು ಇಲ್ಲಿರುವುದು ಸರಿಯಿಲ್ಲ ಎಂದು ಮನೆ ಬಿಟ್ಟೆ. ಗುರುದ್ವಾರಕ್ಕೆ ಬಂದೆ. ಇರಲು ಜಾಗ ಕೊಟ್ಟರು. ಭಕ್ತರಿಗೆ ಊಟ ಬಡಿಸುವ ಕೆಲಸವನ್ನು ಮಾಡುತ್ತಿದ್ದೆ. ನನ್ನ ಮಕ್ಕಳು ಗುರುದ್ವಾರದ ಆವರಣದಲ್ಲಿ ಅನಾಥ ಮಕ್ಕಳಂತೆ ಆಟವಾಡಿಕೊಂಡಿದ್ದರು.

ಇನ್ನೆಷ್ಟು ದಿನ ಇಲ್ಲಿರಲು ಸಾಧ್ಯ? ದುಡಿಯಬೇಕು, ಸ್ವಂತ ಬದುಕು ಕಟ್ಟಿಕೊಳ್ಳಬೇಕು ಎಂದು ನಿರ್ಧರಿಸಿದೆ. ಮುಂಬೈ ಸೇರಿದೆ. ಈ ನಗರದಲ್ಲಿನ್ನೆಂಥ ಕೆಲಸ? ಬಾರ್‌ಗಳಲ್ಲಿ ನೃತ್ಯ ಮಾಡಿದರೆ ದೇಹದ ಮೇಲೊಂದಿಷ್ಟು ಹಣ ಎಸೆಯುತ್ತಾರಷ್ಟೇ. ಇದೇ ಬದುಕಾಗಬಾರದು ಎನಿಸಿತು.

ಪರಿಚಯಸ್ಥರೊಬ್ಬರ ಬಳಿ ಪರಿಸ್ಥಿತಿ ಹೇಳಿಕೊಂಡೆ. ಅವರು ಅಡುಗೆ ಕೆಲಸಕ್ಕೆ ಸೇರಿಸಿದರು. ಒಂದು ಸಂಜೆ ಮನೆಗೆ ಬಂದ ಆ ಪರಿಚಯಸ್ಥರು 'ಈ ಮನೆ ಮಾಲೀಕರ ಹೆಂಡತಿ ತೀರಿ ಹೋಗಿದ್ದಾಳೆ. ಅವರಿಗೆ ಆಸರೆಯಾಗಿರು. ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಾಲ್ಕು ಮನೆ ಕೆಲಸ ಮಾಡಿದರೆ ನಾಲ್ಕು ಸಾವಿರ ಸಿಗ-ಬಹುದಷ್ಟೇ. ಇವರೊಂದಿಗಿದ್ದರೆ ನಿನ್ನ ಜೀವನವೂ ಸುಧಾರಿಸುತ್ತದೆ' ಎಂದರು.

ಸಿಟ್ಟು ಬಂತು. 'ನನ್ನ ಜೀವನವನ್ನು ನೋಡಿಕೊಳ್ಳುವುದು ನನಗೆ ಗೊತ್ತು. ಮಾನ ಮರ್ಯಾದೆ ಅಡವಿಟ್ಟು ಮಕ್ಕಳನ್ನು ಸಾಕುವ ಅನಿವಾರ್ಯತೆ ನನಗಿಲ್ಲ, ಎಂದವಳೇ ಜಾಗ ಖಾಲಿ ಮಾಡಿದೆ. ರೋಟಿ ಮಾರಾಟ ಮಾಡುತ್ತಿದ್ದ ಅಂಗಡಿಯಲ್ಲಿ ಕೆಲಸ ಸಿಕ್ಕಿತ್ತು. ಅಲ್ಲೇ ಊಟವನ್ನೂ ಕೊಡುತ್ತಿದ್ದರು. ಹೊಟ್ಟೆ ತುಂಬಿಸುವ ಯೋಚನೆಯೂ ಇಲ್ಲವಾಯಿತು. ಅಲ್ಲಿ ಕೆಲಸ ಮಾಡುವ ಹುಡುಗಿಯ ಜೊತೆ ಕೊಠಡಿ ಹಂಚಿಕೊಂಡು ಅವರೊಂದಿಗೆ ಬದುಕುತ್ತಿದ್ದೆ.

ಸಂಜೆ ಆಗುತ್ತಿದ್ದಂತೆ ಆ ಹುಡುಗಿಯರೆಲ್ಲ ಸಿಂಗಾರಗೊಂಡು ಮತ್ತೊಂದು ಕೆಲಸಕ್ಕೆ ಹೋಗುತ್ತಿದ್ದರು. ಅವರ ಬಳಿ ಏನು ಕೆಲಸವೆಂದು ವಿಚಾರಿಸಿದೆ. ಮಸಾಜ್ ಮಾಡುವ ಕೆಲಸವೆಂದರು. ನಾನು ಆ ವಿಚಿತ್ರ ಸ್ಥಳಕ್ಕೆ ಹೋದೆ. ಸುತ್ತಲೂ ಕತ್ತಲೆ ಒಳಗೆ ಮಾತ್ರ ದೀಪ, ಕ್ರೀಂಗಳ ಸುವಾಸನೆ. ಮಾಲೀಕರು ಮಸಾಜ್ ಮಾಡಲು ಬರುತ್ತಾ ಎಂದು ಕೇಳಿದರು, ನಾನು ಹೌದು 'ನಮ್ಮ ಅತ್ತೆಗೆ ಮಾಡುತ್ತಿದ್ದೆ' ಎಂದೆ. ಸಂಬಳ ತಿಂಗಳಿಗೆ 8 ಸಾವಿರ ಎಂದರು.

ನನಗೆ ಖುಷಿ, ತಿಂಗಳಿಗೆ 8 ಸಾವಿರ!.. ಒಪ್ಪಿಕೊಂಡೆ, ಗಂಡಸರು ಬರುತ್ತಾರಾ ಎಂದು ಗೆಳತಿಯನ್ನು ಕೇಳಿದೆ, 'ಹೌದು, ನೆನ್ನೆ ಒಬ್ಬ ಬಂದಿದ್ದ ತುಂಬಾ ಕಷ್ಟ-ಕೊಟ್ಟ, ಕೈಯಲ್ಲಿ ಮಸಾಜ್ ಮಾಡಿದ್ದು ಸಾಕು ಬಾಯಿಂದ ಮಾಡು ಎನ್ನುತ್ತಿದ್ದ, ತಪ್ಪಿಸಿಕೊಂಡು ಬರುವಷ್ಟರಲ್ಲಿ ಸಾಕಾಯ್ತು' ಎಂದಳು. ಕೇಳಿ ತಲೆ ಸುತ್ತು ಬಂತು. ನಿಧಾನ ಅರ್ಥವಾಗಲು ಶುರುವಾಯ್ತು. ಇದು ಹೆಸರಿಗಷ್ಟೆ ಮಸಾಜ್ ಪಾರ್ಲರ್ ಎಂದುಕೊಂಡು, ಗೆಳತಿಗೆ ಹೇಳಿದೆ 'ನೀನು ಈ ವಿಚಾರ ಮೊದಲೇ ಹೇಳಬೇಕಿತ್ತು. ಈ ಕಟ್ಟಡದಿಂದ ಆಚೆ ಹೋಗುತ್ತಿದ್ದಂತೆ ಜನ ನನ್ನನ್ನು ಅದೇ ದೃಷ್ಟಿಯಿಂದ ನೋಡುತ್ತಾರೆ' ಎಂದು ಅಳುತ್ತಾ ಅಲ್ಲಿಂದ ಓಡಿ ಬಂದೆ.

ಎಷ್ಟೇ ಕಷ್ಟ ಬಂದರೂ ನನ್ನ ಸ್ವಾಭಿಮಾನ ಬಿಟ್ಟಿರಲಿಲ್ಲ. ಅಪ್ಪ ನೆನಪಾದರು. ನನಗೆ ಕೆಲಸ ಬೇಕೇಬೇಕು ಎಂದು ಹಟ ಹಿಡಿದೆ. ಅವರು ತಮ್ಮ ಗೆಳೆಯರೊಬ್ಬರ ನಂಬರ್ ಕೊಟ್ಟರು. ಅವರ ಬಳಿ ಮದುವೆಗಳಲ್ಲಿ ಹೋಗಿ ನೃತ್ಯ ಮಾಡುವ ನೃತ್ಯ ತಂಡವಿತ್ತು. ಅವರು ಸಿನಿಮಾಗಳಲ್ಲೂ ಕೆಲಸ ಮಾಡುತ್ತಿದ್ದರು.

ಶೂಟಿಂಗ್ ಕೆಲಸವಿದೆ ಮಾಡುತ್ತೀಯಾ ಎಂದರು. ಒಪ್ಪಿಕೊಂಡೆ. ಅಲ್ಲಿ ಚಪ್ಪಾಳೆ ಹೊಡೆಯುವುದೇ ನನ್ನ ಕೆಲಸ. ಮಧ್ಯೆ ಟೀ, ಕಾಫಿ ಕೊಡುತ್ತಿದ್ದರು. ಊಟ ಸಿಗುತ್ತಿತ್ತು. ಶೂಟಿಂಗ್ ನೋಡಬಹುದಲ್ಲಾ ಎನ್ನುವ ಖುಷಿ ನನಗೆ.

ಒಂದು ದಿನ ಚಿತ್ರೀಕರಣದಲ್ಲಿ ಸಾಹಸ ದೃಶ್ಯವೊಂದಿದೆ ಮಾಡುತ್ತೀಯಾ ಎಂದು ಕೇಳಿದರು, ನಾನು ಒಪ್ಪಿಕೊಂಡೆ. ಮರುದಿನವೇ ಲಡಾಕ್‌ಗೆ ಹೊರಟೆವು. ಅಲ್ಲಿ ಬೆಂಕಿ ನಿರೋಧಕ ಬಟ್ಟೆ ತೊಡಿಸಿ, ಬೆಂಕಿ ಹಚ್ಚಿದರು. ವಿಪರೀತ ಗಾಳಿ ಇತ್ತು, ಇದರಿಂದ ನನ್ನ ಮುಖದ ಕೆಲ ಭಾಗ ಸುಟ್ಟುಹೋಯಿತು. ಆ ಸಾಹಸ ದೃಶ್ಯ ಮಾಡಿದ ನಂತರ ನಾನು ಎಲ್ಲರ ಮುಂದೆ ಹೀರೊ ಆಗಿದ್ದೆ.

ಮನೆಯಲ್ಲಿ ಮಕ್ಕಳು ಗಾಬರಿಯಾದರು, ಆದರೆ ನನಗೆ ಈ ಕೆಲಸ ಬಹಳ ಇಷ್ಟವಾಯ್ತು. ಇನ್ನೀ ಕೆಲಸವನ್ನು ಬಿಡುವುದಿಲ್ಲ ಎಂದು ನಿರ್ಧರಿಸಿದೆ. ಒಳ್ಳೆಯ ಅವಕಾಶಗಳೂ ಬರಲಾರಂಭಿಸಿದವು. ಮಕ್ಕಳನ್ನು ಉತ್ತಮ ಶಾಲೆಗೆ ಸೇರಿಸಿದೆ. ಹೊಟ್ಟೆ ತುಂಬಾ ಊಟ ಮಾಡಿದೆ. ಬೈಕ್ ವೀಲಿಂಗ್ ಮಾಡುವುದು, ಕಾರ್ ವೀಲಿಂಗ್ ಮಾಡುವುದು ಕಲಿತೆ. ಹಲವು ರಿಯಾಲಿಟಿ ಶೋಗಳನ್ನು ಮಾಡಿದೆ. ಈಗ ಬಾಲಿವುಡ್‌ನಲ್ಲಿ ನಾನು ಫೇಮಸ್ ಸ್ಟಂಟ್‌ವುಮೆನ್..